ದುರಸ್ತಿ ಮಾಡಿಸಬೇಕಾಗುತ್ತದೆ. ದುರಸ್ತಿಗಾಗಿ ಸ್ವಲ್ಪ ಹಣ ಖರ್ಚಾಗುವುದು ಸ್ವಾಭಾವಿಕ. ನಂತರ ಟ್ರಾಕ್ಟರ್ ಟ್ರೈಲರ್‌ಗಳನ್ನು ಅರ್ಹತಾ ಪ್ರಮಾಣ ಪತ್ರ ನವೀಕರಣಕ್ಕಾಗಿ ಹಾಜರುಪಡಿಸಬೇಕಾಗುತ್ತದೆ.

ಹೊಸ ಮೋಟಾರು ವೆಹಿಕಲ್ಸ್ ಆಕ್ಟ್ ೧೯೮೮ ಪ್ರಾರಂಭವಾಗುವುದಕ್ಕೆ ಮೊದಲು ಅಂದರೆ ೧-೭-೧೯೮೮ರ ಹಿಂದೆ, ವ್ಯವಸಾಯಕ್ಕೆ ಉಪಯೋಗಿಸುವ ಟ್ರಾಕ್ಟರ್ ಟ್ರೈಲರ್‌ಗಳಿಗೆ ಎರಡು ವರ್ಷಗಳ ವರೆಗೆ ಅರ್ಹತಾ ಪ್ರಮಾಣ ಪತ್ರ ನವೀಕರಿಸಲಾಗುತ್ತಿತ್ತು.

ಸಾರ್ವಜನಿಕ ಸುರಕ್ಷತೆ ಹಿತದೃಷ್ಟಿಯಿಂದ ರಾಷ್ಟ್ರದ ಎಲ್ಲಾ ರಾಜ್ಯಗಳ ಮತ್ತು ಕೇಂದ್ರಾಡಳಿತ ಪ್ರದೇಶಗಳ ಏಕರೂಪವಾದ ಅರ್ಹತಾ ಪ್ರಮಾಣ ಪತ್ರ ಪದ್ಧತಿ ಜಾರಿಗೆ ತರುವ ದೃಷ್ಟಿಯಿಂದ ಕೇಂದ್ರ ಸರ್ಕಾರವು ಸೆಂಟ್ರಲ್ ಮೋಟಾರ್ ವೆಹಿಕಲ್ಸ್ ರೂಲ್ಸ್ ೧೯೮೯ ಜಾರಿಗೆ ತಂದಿರುವುದರಿಂದ ವಾಹನಗಳ ಪ್ರಮಾಣ ಪತ್ರವನ್ನು ಒಂದು ವರ್ಷದವರೆಗೆ ಮಾತ್ರ ನವೀಕರಣ ಮಾಡಲಾಗುತ್ತಿದೆ. ಈಗ ಕೇಂದ್ರ ಸರ್ಕಾರವೇ ಈ ನಿಯಮ ಮಾಡಿರುವುದರಿಂದ, ಟ್ರಾಕ್ಟರ್ ಟ್ರೈಲರ್‌ಗಳ ಪ್ರಮಾಣ ಪತ್ರದ ನವೀಕರಣದ ಅವಧಿಯನ್ನು ಒಂದು ವರ್ಷದಿಂದ ಎರಡನೇ ವರ್ಷಕ್ಕೆ ಬದಲಾವಣೆ ಮಾಡಬೇಕಾದರೆ ಸೆಂಟ್ರಲ್ ಮೋಟಾರ್ ವೆಹಿಕಲ್ಸ್ ರೂಲ್ಸ್ ೧೯೮೯ಕ್ಕೆ ಸೂಕ್ತವಾಗಿ ತಿದ್ದುಪಡಿ ತರಬೇಕಾಗುತ್ತದೆ. ಈ ಬಗ್ಗೆ ರಾಜ್ಯ ಸರ್ಕಾರಕ್ಕೆ ಟ್ರಾಕ್ಟರ್ ಟ್ರೈಲರ್‌ಗಳ ಅರ್ಹತಾ ಪ್ರಮಾಣ ಪತ್ರ ಅವಧಿ ನಿಗಧಿಪಡಿಸಲು ಅಧಿಕಾರವಿರುವುದಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ.—ಮಾನ್ಯ ಅಧ್ಯಕ್ಷರೇ ನಿಯಮ ೩೩೪ರಲ್ಲಿ ಮಾನ್ಯ ಮಂತ್ರಿಗಳ ಗಮನಕ್ಕೆ ಮಾನ್ಯ ಈ ವಿಷಯ ತರಬಹುದಾಗಿದೆ ಆದರೆ ಇದರಲ್ಲಿ ಅನೇಕ ವಿಷಯಗಳು ಅಡಕವಾಗಿವೆ. ಆದ್ದರಿಂದ ದಯಮಾಡಿ ಇದನ್ನು ಅರ್ಧ ಗಂಟೆಯ ಮೇಲಿನ ಚರ್ಚೆಗೆ ಪರಿವರ್ತನೆ ಮಾಡಿದರೆ ಒಳ್ಳೆಯದೆಂದು. ಅನೇಕ ಜನ ಮಾನ್ಯ ಸದಸ್ಯರು ಮಾತನಾಡುವವರಿದ್ದಾರೆ. ನಾವು ನೋಟೀಸ್ ಕೊಟ್ಟಿದ್ದೇ ಗಮನ ಸೆಳೆಯುವ ಸೂಚನೆ ಎಂದು. ಅದು ಹೇಗೋ ನಿಯಮ ೩೩೪ ಆಗಿದೆ.

ಅಧ್ಯಕ್ಷರು.—ಆಯಿತು ತಾವು ಇನ್ನೊಂದು ನೋಟಿಸ್ ಕೊಡಿ.

(೩) ಉಳ್ಳಾಲದಲ್ಲಿ ಕಡಲ ಕೊರೆತವನ್ನು ತಡೆಗಟ್ಟಲು ತಡೆಗೋಡೆಗಳ ನಿರ್ಮಾಣ

ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಅಧ್ಯಕ್ಷರೇ, ಉಳ್ಳಾಲದಲ್ಲಿ ಕಡಲು ಕೊರೆತ ಕಳೆದ ಮೂರು ವರ್ಷಗಳಿಂದ ಎಡೆಬಿಡದೆ ನಡೆದಿದೆ. ಇದರಿಂದಾಗಿ ನೂರಾರು ಬಡವರ ಮನೆಗಳು, ಮೀನು ಕಸುಬಿನವರ ಅನೇಕ ಶೆಡ್ಡುಗಳು ನಾಶವಾಗಿ ಹೋಗಿವೆ. ಇದೀಗ ಈ ವರ್ಷ ಇದೇ ತಿಂಗಳಿನಲ್ಲಿ ಕಡಲಿನ ನೀರು ಉಳಿದ ಭಾಗಗಳಿಗೂ ಆವರಿಸಿದೆ. ಉಳ್ಳಾಲದ ಈ ಭಾಗಕ್ಕೆ ಶಾಶ್ವತ ತಡೆಗೋಡೆ ಕಟ್ಟುವ ಕುರಿತು ಅನೇಕ ವರ್ಷಗಳಿಂದ ಕೇಳುತ್ತಾ ಬರಲಾಗಿದೆ ಇನ್ನೂ ಕೆಲಸ ಪ್ರಾರಂಭವಾಗಿರುವುದಿಲ್ಲ. ಆದರಿಂದಾಗಿ ಪರಿಸರದ ಜನರು ತುಂಬಾ ಕಂಗಾಲಾಗಿರುತ್ತಾರೆ.

ಆದಕಾರಣ ಈ ವರ್ಷವೇ ಉಳ್ಳಾಲದಲ್ಲಿ ತಡೆಗೋಡೆ ನಿರ್ಮಾಣ ಮಾಡುವ ಕೆಲಸವನ್ನು ಪ್ರಾರಂಭಿಸಬೇಕು. ಈ ಕುರಿತು ನೀರಾವರಿ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಎತ್ತಿದಂಥ ಪ್ರಶ್ನೆಯಂಥ ಸಂಬಂಧಪಟ್ಟ ಬಂದರು. ಮೀನುಗಾರಿಕೆ, ವಸತಿ ಮತ್ತು ನಗರಾಭಿವೃದ್ಧಿ ಸಚಿವರ ಗಮನಕ್ಕೆ ಸೂಕ್ತ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಹೇಳಲಾಗುವುದು.

(೪) ಬೆಂಗಳೂರಿನ ರಾಜಾಜೀನಗರದಲ್ಲಿ ನೈರ್ಮಲ್ಯತೆಯ ಕೆಲಸಗಳು ಸರಿಯಾಗಿ ನಡೆಯದೇ ಇರುವುದು.

ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ).—ಮಾನ್ಯ ಅಧ್ಯಕ್ಷರೇ, ಬೆಂಗಳೂರು ಮಹಾನಗರ ಸ್ವಚ್ಛತೆ ಹಾಗೂ ಸೌಂದರ್ಯ ನಗರವೆಂದು ತುಂಬಾ ಹೆಸರುವಾಸಿಯಾಗಿದ್ದು ಈಗ ಹಾಳಿ ಬೆಂಗಳೂರು ನಗರದಲ್ಲಿ ಸ್ವಚ್ಛತೆ ಹಾಗೂ ನೈರ್ಮಲ್ಯತೆ ಕೆಲಸ ಕಾರ್ಯಗಳನ್ನು ಸರಿಯಾಗಿ ನಿರ್ವಹಿಸದೆ ಇರುವುದರಿಂದ ಬೆಂಗಳೂರು ನಗರಕ್ಕೆ ಸೌಂದರ್ಯ ನಗರ ಎನ್ನುವ ಹೆಸರು ದಿನೇ ದಿನೇ ಕಡಿಮೆಯಾಗುತ್ತಿದೆ. ಈ ಸಂಬಂಧದಲ್ಲಿ ನನ್ನ ಕ್ಷೇತ್ರವಾದ ರಾಜಾಜೀನಗರದಲ್ಲಿ ನೈರ್ಮಲ್ಯತೆಯ ಕೆಲಸಗಳನ್ನು ಸರಿಯಾಗಿ ನಿರ್ವಹಿಸದೇ ಇರುವುದರಿಂದ ಮಾನ್ಯ ಮುಖ್ಯ ಮಂತ್ರಿಗಳು ಗಮನಹರಿಸಿ ಸೂಕ್ತ ಆದೇಶ ನೀಡಬೇಕೆಂದು ಕೋರುತ್ತೇನೆ.